## ಇಲ್ಲಿಯವರೆಗೆ



ಸಾರಾಯಿ ಅಂಗಡಿ ನರಸಯ್ಯ ಮಲ್ಲಿಗೆಯನ್ನು ತೋಟದ ಬಾವಿ ಬಳಿ ಕರೆದುಕೊಂಡು ಹೋಗುತ್ತಾನೆ. ಅಪ್ರತಿಮ ಸುಂದರಿಯಾದ ಮಲ್ಲಿಗೆಯನ್ನು ಕಂಡಕೂಡಲೇ ಕಾಮುಕ ನರಸಯ್ಯ ಆಕೆಯ ಕೈ ಹಿಡಿದುಕೊಳ್ಳುತ್ತಾನೆ. ತೋಟದಲ್ಲೇ ಒಂದು ಮನೆ ಇರುತ್ತದೆ. ಅದರೊಳಗೆ ಹೋಗೋಣವೇ ಎಂದು ನರಸಯ್ಯ ಮಲ್ಲಿಗೆಯನ್ನು ಕೇಳಿದ ಕೂಡಲೇ ಒಪ್ಪಿಗೆ ಸೂಚಿಸುತ್ತಾಳೆ. ಆಕೆಯನ್ನು ಚುಂಬಿಸುತ್ತಾನೆ. ಸರಸ ಸಲ್ಲಾಪಗಳಿಗೆ ಆಕೆ ಸ್ಪಂದಿಸುತ್ತಾಳೆ. ಒಂದು ಕತ್ತರಿ ಸಹಾಯದಿಂದ ನರಸಣ್ಣನ ಕೂದಲು ಕತ್ತರಿಸಿಕೋಮಡು ಅಲ್ಲಿಂದ ನಡೆಯುತ್ತಾಳೆ ಮಲ್ಲಿಗೆ. ಅರ್ಧ ಗಂಟೆಯ ಬಳಿಕ ನರಸಣ್ಣನನ್ನು ಆಳುಗಳು ಬಂದು ಎಚ್ಚರಿಸಿದಾಗ ಮಲ್ಲಿಗೆಯನ್ನು ಹುಡುಕಾಡುತ್ತಾನೆ. ಅವನಿಗೆ ಏನೋ ಅನುಮಾನ ಕಾಡುತ್ತದೆ. ಸ್ಮಶಾನದಲ್ಲಿ ಅಗ್ನಿಕುಂಡದ ಸುತ್ತ ಹೊಗೆ ಹಾಕುತ್ತಾಳೆ. ತ್ರಿಮಯ ಸ್ವರದಲ್ಲಿ ಮಂತ್ರ ಹೇಳುತ್ತಾಳೆ. ಸಾರಾಯಿ ನರಸಯ್ಯನ ಮೇಲೆ ಕ್ಷುದ್ರಶಕ್ತಿ ಪ್ರಯೋಗ ಮಾಡುತ್ತಾಳೆ. ಆತ ಶಾಶ್ವತ ಅಂಗವಿಕಲನಾಗುತ್ತಾನೆ. ಇದು ಮಲ್ಲಿಗೆಯದೇ ಮಹಿಮೆ. ಆಕೆ ಮಹಿಳೆಯಲ್ಲ; ಪಿಶಾಚಿ ಎಂಬುದು ಆತನಿಗೆ ಅರಿವಾಗುತ್ತದೆ. ರುದ್ರನಾಗ ಗಹಗಹಿಸಿ ನಗುತ್ತಾನೆ.

ಮದಂತ ಮಲ್ಲಿಗೆಗೆ ಮಾಂತ್ರಿಕ ವಿದ್ಯ, ಪಾತಾಳ ಭೈರವಿ ವಿದ್ಯೆಗಳನ್ನು ಕಲಿಸುತ್ತಾನೆ. ಆಕೆ ಎಷ್ಟು ಅಪ್ರತಿಮ ಸುಂದರಿ. ಜಗತ್ತಿಗೆ ಖ್ಯಾತಿ ಪಡೆಯಬೇಕಾದವಳು. ಆದರೆ ಎಂಥ ನತದೃಷ್ಟೆ ಎಂದು ಭಾವಿಸುತ್ತಾನೆ ಮದಂತ. ರುದ್ರನಾಗನಲ್ಲಿ ಮನೋಹರನ ಮೇಲಿನ ಸಿಟ್ಟು ಸೇಡು ಭುಗಿಲೇಳುತ್ತದೆ. ತನ್ನ ಪತ್ನಿ, ಮಕ್ಕಳನ್ನು ಕೈಕರಣ ಮಾಡಿಸುವಂತೆ ಮಾಡಿ ಕೊಂದ ಪಾಪಿ ಮನೋಹರ. ಆತನಿಗೆ ತಕ್ಕ ಶಾಸ್ತಿ ಮಾಡಬೇಕು ಎಂಬ ಯೋಚನೆ ರುದ್ರನಾಗನದು. ಅದೂ ಅಲ್ಲದೆ ಮನೋಹರ–ಅರುಂಧತಿ ಮಗಳಾದ ಮಲ್ಲಿಗೆಯ ಕೈಯಲ್ಲೇ ಇದನ್ನು ಮಾಡಿಸಬೇಕು ಎಂದೂ ಕ್ರೂರಿ ರುದ್ರನಾಗ ಸಂಚು ರೂಪಿಸುತ್ತಾನೆ. ಅಲ್ಲದೆ ಮಲ್ಲಿಗೆಯ ಸೋದರಮಾವನಾದ ರುದ್ರನಾಗ ಆಕೆಗೆ 'ಕಂಸ'ನ ರೀತಿಯಲ್ಲಿ ಬಹಳ ಹಿಂಸೆ ಕೊಡುತ್ತಾನೆ. ಮದಂತನಿಗೆ ಇವೆಲ್ಲವನ್ನೂ ನೋಡಲಾಗುತ್ತಿಲ್ಲ. ಈ ಮಧ್ಯೆ ಮನೆಯ ಎದುರುಗಡೆ ಮನೆಯಲ್ಲಿ ಪೂಜೆ ನಡೆಯುತ್ತದೆ. ಸುನಾದಭರಿತ ಗಂಟೆನಾದ ಮನಸೆಳೆಯುತ್ತದೆ. ಮಲ್ಲಿಗೆ ಅಲ್ಲಿಗೆ ಹೋಗುತ್ತಾಳೆ. ಇದನ್ನು ಕಂಡ ರುದ್ರನಾಗ ರೌದ್ರಾವತಾರ ತಾಳಿ ನಾಗರಬೆತ್ತದಲ್ಲಿ ಮಲ್ಲಿಗೆಗೆ ಬಾಸುಂಡೆ ಬರುವಷ್ಟು ಹೊಡೆಯುತ್ತಾನೆ. ಇದನ್ನು ಮದಂತನಿಗೆ ಸಹಿಸಲಾಗುತ್ತಿಲ್ಲ. ಆಕೆಯ ಬಾಸುಂಡೆಗೆಲ್ಲ ಮುಲಾಮು ಹಚ್ಚುತ್ತಾನೆ ಮದಂತ. ತೋಳ ಕಚ್ಚಿಕೊಂಡು ಹೋದ ಮಗುವನ್ನು ತಂದು ಸಾಕಿ ಸಲಹಿದ ಮದಂತನಿಗೆ ಮಲ್ಲಿಗೆ ಮೇಲೆ ಅದಮ್ಯ ಮಮತೆ. ಮಲ್ಲಿಗೆಯ ಬಳಿ ತಾಯಿಯ ಫೋಟೊ ನೋಡಿದ್ದಿಯಾ, ನಿನ್ನ ತಾಯಿಯಂತೆಯೇ ನೀನೂ ಕಾಣುತ್ತಿ ಎನ್ನುತ್ತಾನೆ. ಮಾವನ ಟ್ರಂಕಿನಲ್ಲಿದ್ದ ಅರುಂಧತಿಯ ಫೋಟೊ ನೋಡುತ್ತಾಳೆ ಮಲ್ಲಿಗೆ. ಈ ಮಧ್ಯೆ ಅಮೆರಿಕಕ್ಕೆ ಹೋದ ಅರುಂಧತಿ–ಮನೋಹರ ಇನ್ನೊಬ್ಬ ಮಗಳು ಕಾವ್ಯಾ ಜತೆಗೆ ಇಂಡಿಯಾಕ್ಕೆ ಬರುತ್ತಾರೆ. ಕಾವ್ಯಾಳಿಗೆ ಸುರೇಂದ್ರ ಎಂಬವನ ಜತೆಗೆ ಮದುವೆ ಗೊತ್ತಾಗುತ್ತದೆ. ಮನೋಹರ ಸೋಲಿಗಪುರಕ್ಕೆ ಹೋಗುವ ನಿರ್ಧಾರ ಮಾಡುತ್ತಾನೆ.

ನೀಡಲು ಬಳಸಿಕೊಳ್ಳುತ್ತಾನೆ.

ಮಲ್ಲಿಗೆ ಕ್ರೂರ ಕ್ಷುದ್ರಶಕ್ತಿಗಳನ್ನೇ ತನ್ನ ರಕ್ತ ಸಂಬಂಧಿಗಳ ಮೇಲೆ ಪ್ರಯೋಗಿಸುತ್ತಾಳೆ. ಇಲ್ಲಿದ್ದರೆ ಆ ದುರಂತವನ್ನು ತಾನು ಕಣ್ಣಾರೆ ನೋಡಬೇಕಾಗುತ್ತದೆ. ಅದಕ್ಕೆ ಈ ಊರಿನಿಂದಲೇ ದೂರ ಹೋಗುವ ನಿರ್ಧಾರ ಮಾಡಿದ್ದ. ಆದರೆ ಇದನ್ನು ಮಲ್ಲಿಗೆಗೆ ಹೇಳಲಿಲ್ಲ. ಅವಳ ತಲೆಯನ್ನು ಸವರಿ, ನೆತ್ತಿಯನ್ನು ಚುಂಬಿಸಿ ಅಲ್ಲಿಂದ ಹೊರಟ.

ಅವನು ಹೋಗುವುದನ್ನೇ ನೋಡುತ್ತಾ ಮಲ್ಲಿಗೆ ಕಂಬನಿ ಮಿಡಿಯುತ್ತಿದ್ದಾಳೆ. ಅವಳಿಂದ ಸಂಕಟ ತಡೆಯಲಾಗುತ್ತಿಲ್ಲ. ಅವಳು ಬಿಕ್ಕಳಿಸಿಕೊಂಡು ಅಳುತ್ತಿದ್ದಾಳೆ.

ಇವಳು ತಾಯಿಯ ಗರ್ಭದಿಂದ ಹೊರಗೆ ಬಂದ ಕೂಡಲೇ ತೋಳ ಕಚ್ಚಿಕೊಂಡು ಹೋಗಿತ್ತು. ಇದನ್ನು ಕಂಡು ತೀರಾ ಆಕಸ್ಮಿಕ ರೀತಿಯಲ್ಲಿ ಮದಂತ ರಕ್ಷಣೆ ಮಾಡಿದ್ದ. ಅಂದಿನಿಂದ ಪ್ರೀತಿವಾತ್ಸಲ್ಯ ತೋರಿಸಿ ಇವಳನ್ನು ಬೆಳೆಸಿ ಮಾಂತ್ರಿಕ ವಿದ್ಯೆ ಕಲಿಸಿದ್ದ. ಅಂತಹ ವಾತ್ಸಲ್ಯಮೂರ್ತಿ ತನ್ನಿಂದ ದೂರಾಗುತ್ತಿದ್ದಾನೆ ಎಂದರೆ ಸಂಕಟ ಆಗದಿರುವುದೇ.

ಮದಂತ ರುದ್ರನಾಗನಿಗೂ ಸಹ ತಿಳಿಸದಂತೆ ತನ್ನ ಪ್ರಯಾಣ ಪ್ರಾರಂಭಿಸಿದ್ದ. ಮದಂತನ ಪಾತ್ರ ಮುಗಿದಿಲ್ಲ. ಅದು ಬೇರೊಂದು ಕಡೆ ಬೇರೊಂದು ರೀತಿಯಲ್ಲಿ ಪುನರ್ ಪ್ರಾರಂಭ ಆಗುವುದರಲ್ಲಿತ್ತು. ಮದಂತ ಸಹ ಪ್ರತಿಜ್ಞೆ ಮಾಡಿದ್ದ. ಅದರಂತೆ ಇಪ್ಪತ್ತು ವರ್ಷಗಳಿಂದ ಮಾಂತ್ರಿಕ ವಿದ್ಯೆಯನ್ನು ಯಾರ ಮೇಲೂ ಪ್ರಯೋಗಿಸಿರಲಿಲ್ಲ. ಆದರೆ ಅಗೋಚರ ವಿಧಿ ಸುಮ್ಮನೆ ಇರಲು ಸಾಧ್ಯವೇ ಇಲ್ಲ.

* * *

ಕಾರು ಚಲಿಸುತ್ತಿದೆ. ಮನೋಹರ ತಾನೇ ಡ್ರೈವ್ ಮಾಡುತ್ತಿದ್ದಾನೆ. ತನ್ನ ಜೊತೆ ಅವನು ಯಾರನ್ನೂ ಸಹ ಕರೆದುಕೊಂಡು ಹೋಗಿರಲಿಲ್ಲ. ಹೆಂಡತಿಮಕ್ಕಳಿಗೆ 'ಬಿಸಿನೆಸ್'ಗಾಗಿ ಬಾಂಬೆಗೆ ಹೋಗಿ ಬರುತ್ತೇನೆ' ಎಂದು ಸುಳ್ಳು ಹೇಳಿದ್ದ. ಆದರೆ ಅವನು ಹೋಗುತ್ತಿರುವುದು ಬಾಂಬೆಗೆ ಅಲ್ಲ. ಸೋಲಿಗಪುರಕ್ಕೆ; ಹೆಂಡತಿಯ ತವರೂರಿಗೆ.

ಇಪ್ಪತ್ತು ವರ್ಷಗಳ ನಂತರ ಅವನು ಈ ಊರಿಗೆ ಬರುತ್ತಿದ್ದಾನೆ. ಏನೋ ಒಂದು ರೀತಿಯ ಆತಂಕ... ಗಾಬರಿ. ರುದ್ರನಾಗನನ್ನು ಎದುರಿಸುವುದು ಹೇಗೆ? ಹೆಂಡತಿ ಮತ್ತು ಮಗಳು ಕಾವ್ಯ ಇಲ್ಲಿಗೆ ಬರಬೇಕು ಎಂದು ಒತ್ತಾಯ ಮಾಡುತ್ತಿದ್ದರು. ಅವರು ಇಲ್ಲಿಗೆ ಬಂದರೆ ತಾನು ಮಾಡಿರುವ ತಪ್ಪು ಬಯಲಾಗುತ್ತದೆ. ರುದ್ರನಾಗ ಎಲ್ಲವನ್ನೂ ಹೇಳುತ್ತಾನೆ. ನನ್ನನ್ನು ನನ್ನ ಹೆಂಡತಿ ಮತ್ತು ಮಗಳು ಇಬ್ಬರೂ ಸಹ ಖಂಡಿತಾ ಕ್ಷಮಿಸಲಾರರು. ಅದಕ್ಕೆ ಹೆಂಡತಿ ಮತ್ತು ಮಗಳನ್ನು ಕರೆದುಕೊಂಡು ಬರಲು ಹಿಂಜರಿಯುತ್ತಿದ್ದಾನೆ. ರುದ್ರನಾಗನ ಪ್ರತಿಕ್ರಿಯೆಯನ್ನು ನೋಡಿದ ನಂತರ ಮುಂದಿನ ತೀರ್ಮಾನ. ಪರಿಸ್ಥಿತಿ ನನಗೆ ಪ್ರತಿಕೂಲವಾಗಿದ್ದರೆ ಹೆಂಡತಿ ಮಗಳು ಈ ಊರಿಗೆ ಬರದಂತೆ ತಡೆಯಲು ಪ್ರಯತ್ನಿಸುವುದಾಗಿ ಚಿಂತನೆ ನಡೆಸುತ್ತಾನೆ ಮನೋಹರ.

ಸಿಗರೇಟನ್ನು ಹತ್ತಿಸಿಕೊಂಡ. ಆಗ ಸಂಜೆ ಆರೂವರೆ. ಮಬ್ಬುಗತ್ತಲು ಆವರಿಸುತ್ತಿದೆ. ಕಾರು `ಕೀಚ್... ಕೀಚ್' ಎಂದು ಶಬ್ದ ಮಾಡುತ್ತಾ ರಸ್ತೆಯ ಬದಿಯಲ್ಲಿ ನಿಂತುಕೊಂಡಿತು. ಓ... ಕಾರು ಕೈ ಕೊಡುವ ಹಾಗಿದೆ ಎಂದುಕೊಂಡ. ಕೆಳಗೆ ಇಳಿದು ಬಾನೆಟ್‌ಅನ್ನು ಎತ್ತಿ ನೋಡಿದ. ವಿಪರೀತ ಹೊಗೆ ಬರುತ್ತಿತ್ತು. ಎಂಜಿನ್ ಹೀಟ್ ಆಗಿದೆ ಎಂದುಕೊಂಡು ಡಿಕ್ಕಿಯಲ್ಲಿದ್ದ ವಾಟರ್ ಕ್ಯಾನನ್ನು ಎತ್ತಿಕೊಂಡು ನೀರನ್ನು ಹುಡುಕುತ್ತಾ ಹೊರಟ. ಬಲಗೈನಲ್ಲಿ ಟಾರ್ಚ್ ಇದೆ. ಕಾಡಿನ ರಸ್ತೆಯಲ್ಲಿ ನಡೆಯುತ್ತಿದ್ದಾನೆ. ಸುಮಾರು ನಾಲ್ಕು ಫರ್ಲಾಂಗ್‌ಗಳಷ್ಟು ನಡೆದಿರಬಹುದು. ಆಗ ಕಂಡಿತು ಮತ್ತೊಂದು ಕಾರು. ಆಲದ ಮರದ ಅಡಿಯಲ್ಲಿ ನಿಂತಿದೆ.

ಒಳಗೆ ಲೈಟ್ ಬೆಳಗುತ್ತಿದೆ. ಯಾರೋ ಇರಬೇಕು ಎಂದುಕೊಂಡು ಅವನು ಕಾರಿನ ಹತ್ತಿರ ಬಂದು ಬಗ್ಗಿ ನೋಡಿದ. ಬೆಚ್ಚಿಬಿದ್ದು ದೂರ ಸರಿದ. ಬಾಯಿಂದ ಉದ್ಗಾರ ಹೊರ ಬಂದಿತು.